Reg No M. 1299 Srl 30—9—52

36 ನೇ ವರ್ಷ — 36 th Year

ಸತ್ಯವಾದಿ

SATYAVADI

ಬಿಡಿಪ್ರತಿ 3 ಪೈ| ಸ್ಥಾಪಕರು : ಅರಮನೆ ಸಿರಸ್ಸೇದಾರ್ ಎಂ. ವಿ. ಸುಬ್ಬಾಯರ್ರು

ಆಂಧ್ರಪ್ರಾಂತಕ್ಕಾಗಿ ಮಹಿಳೆಯರ ಉಪವಾಸ ಸತ್ಯಾಗ್ರಹ

ವಿಜಯದಶಮಿ

ಮೈಸೂರು : ವಿಜಯ ದಶಮಿಯ ದಂಬೂಸವಾರಿ ಮಹೋತ್ಸವ ವಿಧಿ ಪತ್ಯಾಗಿ ವೈಭವದಿಂದ ನೆರವೇರಿತು ಶ್ರೀಮನ್ಮಹಾರಾಜರವರು ನಿನ್ನೆ ಮಧ್ಯಾಹ್ನ ಶುಭಗಳಿಗೆಯಲ್ಲಿ ಸ್ವರ್ಣ ಅಂಬಾರಿಯಲ್ಲಿ ಪಂಡಿಸಿ ಬನ್ನೀಮಂಟಪಕ್ಕೆ ಸಕಲ ರಾಜಗೌಂವದೊಡನೆ ಜಿಜಯ ಮಾಡಿ ಶ್ರೀಮನ್ಮಹಾರಾಜರವರು ದಂದ ರ್ಶನವನ್ನು ಮೈಸೂರಿಗೂ, ಮೈಸೂರೇಕರರೂ ಪಡೆದು ತುಂಬಾ ಹರ್ಷಿತರಾದರು. ಬನ್ನಿ ಮಂಟಪದಲ್ಲಿ ಶಮಿಾ ಪೂಜೆಯನ್ನು ಸಾಂಗವಾಗಿ ಸ್ಮಭುಗಳು ನೆರವೇರಿಸಿ ರಾತ್ರಿ 10-15 ಗಂಟೆಗೆ ಅರಮನೆ ತಲುಪಿದರು. ಜಂಬೂಸವಾರಿ ಸಂದರ್ಶನ ಪಡೆಯಲು ಎಂದು ಹೊತ್ತೂ ತುಂಬಾ ಜನ ಸೇರಿದ್ದರು

ಡಾ|| ಬಿ ಜಿ ದಾಸಪ್ಪರವರು ಮೈಸೂರು ರೇಷ್ಮೆ ಬಾರು ಸಂಘದ ಪರವಾಗಿ ರಾಜಭಕ್ತಿಯುತವಾಗಿ ಮಹಾಪ್ರಭುಗಳ ಪುರಿಗೆ ಪುಷ್ಪಾಹಾರವನ್ನು ಸಮರ್ಪಿಸಿದರು

ಜುಲ್ಮಾನೆ

ಮಿಶ್ರಿತ ಜಿಣ್ಣೆ ಮಾರಿದ ಆಪಾದನೆ ಮೇಲೆ ಕಳೆದ ವಾರ ಹುಬ್ಬಳ್ಳಿಯ 3 ಮಂದಿಗೆ ತಲಾ ರೂ 300 ದಂಡ ವಿಧಿಸಲಾಯಿತು

ಸಿಂಹಳದಲ್ಲಿ ಏಪ್ರಾಟು

ಭಾವಚಿತ್ರ, ಇರುವ ಗುರುತಿನ ಕಾರ್ಡ್‌ಗಳನ್ನು ಪ್ರತಿಯೆೀರ್ವ ಸಿಂಹಳೆದ ಪ್ರಜೆಗೂ ಕೊಡುವ ಏಪ್ರಾಟಿದೆ ಈ ಮಾರ್ಗದಿಂದ ಲಕ್ಷ್ಮ ಪ್ರವೇಶ ತಡೆಗಟ್ಟಲು ಸಾಧ್ಯವಂತೆ

ರಾವಣ ದಹನ

ಅಲಹಾಬಾದಿನಲ್ಲಿ ತುಂಬಾ ವೈಭವದಿಂದ ನವರಾತ್ರಿ ಉತ್ಸವ ನೆರವೇರಿತು ರಾವಣನ ಪ್ರತಿಮೆ ಸುಡುವಿಕೆಯೊಡನೆ ಉತ್ಸವ ಸಮಾಪ್ತವಾಯಿತು

ವಿಷಪ್ರಾಶನ ಮೊಕದ್ದಮೆ

ಅಕ್ಟೋಬರು ತಾ|| 6 ರಿಂದ, ವಿಷ ಪ್ರಾಶನ ಮೊಕದ್ದಮೆಯಲ್ಲಿ ಶಿಕ್ಷೆಗೆ ಗುರಿಯಾಗಿರುವ ರಾಜುರವರ ಅಪೀಲು ಬೊಂಬಾಯಿ ಹೈಕೋರ್ಟಿನಲ್ಲಿ ವಿಚಾರಣೆಗೆ ಬರುವದು

ಮಲ್ಕ ಆಡಳಿತೆಯಲ್ಲಿ ಬೇಸತ್ತರು

ದಕ್ಷಿಣ ಆಫ್ರಿಕಾ ಮಲ್ಕ ಸರ್ಕಾರದ ಆಡಳಿತೆಯಲ್ಲಿ ಬೇಸತ್ತ ವಿಟ್‌ವಾಟರ್‌ಸ್ರಾಂಡ್ಸಿನ ತತ್ವಶಾಸ್ತ್ರ ಇಲಾಖೆಯ ಮುಖ್ಯಾಧಿಕಾರಿ ಕೇಸಂರು ಇಂಗ್ಲೆಂಡಿನಲ್ಲಿ ಸಾಧಾರಣ ಅಧಿಕಾರವ್ಹೆಂದಕ್ಕೆ ಸೇರಲು ತೆರಳಿರುವದನ್ನು ಜೋಹಾನ್ಸ್ ಬರ್ಗಿನ ಪತ್ರಿಕೆಗಳು ಪ್ರಮುಖವಾಗಿ ಪ್ರಕಟಿಸಿವೆ

ಶಿಕ್ಷೆ ಮತ್ತು ದಂಡ

ಸುಬೂಲಿಯಾ ಗ್ರಾಮದ ರಘುನಾಥ ಸೆಂಬ ಬಟ್ಟೆ ವ್ಯಾಪಾರಿಯು ರೂ 3-0-3 ಬೆಲೆಯ ಸೀರೆಯನ್ನು ರೂ 3-7-0 ಗೆ (0-6-9 ಹೆಚ್ಚು ಬೆಲೆಗೆ) ಮಾರಿದ್ದಕ್ಕಾಗಿ 4 ತಿಂಗಳು ಸಶ್ರಮ ಸಜೆ ಮತ್ತು 5 ನೂರು ರೂ ದಂಡ ವಿಧಿಸಲಾಯಿತು

ನೆಹರು ಹೇಳಿಕೆ

ಪಂ|| ನೆಹರು ಹೈದರಾಬಾದಿನಲ್ಲಿ ಕರೆದಿದ್ದ ಪತ್ರಿಕಾ ಸಂಮೇಳನದಲ್ಲಿ ರಾಜಪ್ರಮುಖರ ಅಡಳಿತ ಬಹುಕಾಲ ಇರುವುದಿಲ್ಲವೆಂದು ತಿಳಿಸಿರುವರು

ಕಲ್ಲು ಎಸೆದರು

ಸಂಧ್ಯಾಲಿನಲ್ಲಿ ಮಸೀದಿ ಹಿಂದಿನಿಂದ ಹಿಂದೂ ಮೆರವಣಿಗೆ ಮೇಲೆ ಕಲ್ಲು ಎಸೆದರು 5 ಮಂದಿಗೆ ಗಾಯವಾಗಿ ಆಸ್ಪೆಕಿ ಟರ್ನ ಆಸ್ಪತ್ರೆಗೆ ದಾಖಲಾದ

ಸಂಮೇಳನ

ಮೊನ್ನೆ ಮೈಸೂರು ಸ್ಯಮುಖರ ಸಂಮೇಳನವನ್ನು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಪ್ರಾರಂಭಿಸಿದರು ಸಚಿವ ಶ್ರೀ ಕಡಿದಾಳ ಮಂಜಪ್ಪನವರು ಅಧ್ಯಕ್ಷತೆ ವಹಿಸಿದ್ದರು ಅಹಾರ ಸವ ಸ್ಯೆಯನ್ನು ಪರಿಶೀಲಿಸಲಾಯಿತು ಸಂಸ್ಥಾನಕ್ಕೆ ಈ ಕೂಡಲೇ ಭಾರತ ಸರ್ಕಾರ ಸಹಾಯನೀಡಬೇಕೆಂದು ಒತ್ತಾಯ ಮಾಡಲಾಯಿತು

ರಾಧಾಕೃಷ್ಣ ಹೇಳಿಕೆ

ಕೈರೋವಿನಲ್ಲಿ ಕರೆದಿದ್ದ ಪತ್ರಿಕಾ ಸಂಮೇಳನದಲ್ಲಿ, ಭಾರತ ಕಮ್ಯುನಿಸ್ಟ ರಾಷ್ಟ್ರವಾಗುವುದಿಲ್ಲವೆಂದು ಡಾ || ರಾಧಾಕೃಷ್ಣನ್ ತಿಳಿಸಿದ್ದಾರೆ

ವಿದ್ಯಾರ್ಥಿಗಳ ಮೇಲೆ ಕಂಪ್ಲೆಂಟು

ನ್ಯೂಯಾರ್ಕಿನ ಬ್ರಾಕ್ಸ್ ವಿಜ್ಞಾನ ಶಾಲೆಯ ವಿದ್ಯಾರ್ಥಿಗಳ ಕಂಪ್ಲೆಂಟು ಹೀಗಿದೆ ವಿದ್ಯಾರ್ಥಿಗಳು ಬಹುಬೇಗ ಒರುತ್ತಾರೆ, ಬಹಳ ಹೊತ್ತಿನವರೆಗೆ ನಿಲ್ಲುತ್ತಾರೆ ಬಹು ಶ್ರಮ ಪಟ್ಟು ಕೆಲಸ ಮಾಡುತ್ತಾರೆ

ಭೂದಾನ

ಆಚಾರ್ಯ ವಿನೋಬ ಭಾವೆ ಕಲ್ಕತ್ತೆಯಲ್ಲಿ ಹೇಳಿಕೆಯಿತ್ತು, ಪಶ್ಚಿಮ ಬಂಗಾಳದಲ್ಲಿ ಭೂದಾನ ಯಜ್ಞಕ್ಕೆ ಹತ್ತು ಲಕ್ಷ ಎಕರೆ ಭೂಮಿ ಸಿಗುವ ನಿರೀಕ್ಷಣೆಯಿದೆಯೆಂದರು

ವ್ಯವಸ್ಥೆಯಾದೀತು

ಬ್ರಿಟೆ-ಇರ್ವಾಗಳಲ್ಲಿ ಎಣ್ಣೆ ಕಲಹ ವ್ಯವಸ್ಥೆಯಾಗುವ ಆಶಯವನ್ನು ಭಾರತದ ಪ್ರಮುಖ ರಾಜಕೀಯವೇತ್ತರಾದ ಜವಿರ್ಜ ಇಸ್ಮೇಲರು ಟಿಹರಾನ್ನಲ್ಲಿ ವ್ಯಕ್ತ ಮಾಡಿರುವರು ಇರಾನ್ ಕೇಳುವ 49 ಮಿಲಿಯ ಪೌಂಡು ಬಹಳ ಸರಿಯಾಗಿದೆ ಎಂದರುಹರು

ನೆಹರು ಭೇಟಿ

ಪಂ|| ನೆಹರು ಸಿರಾ, ಪಾವಗಡ, ಮಧುಗಿರಿ ಮೊದಲಾದ ಸ್ಥಳಗಳಿಗೆ ಸಂದರ್ಶನ ಕೊಟ್ಟು ಅಹಾರಾಂಭಾವವನ್ನು ಪರಿಶೀಲಿಸುವರೆಂದು ತಿಳಿಯುತ್ತೇವೆ ಬರುವ ತಿಂಗಳು 5-6 ರಲ್ಲಿ ಈ ಕಾರ್ಯಕ್ರಮವಿದೆ

ಉಪವಾಸ

ಶ್ರೀಮತಿಗಳಾದ ಕೃಷ್ಣವೇಣಮ್ಮ ಮತ್ತು ಬಂಗಾರಮ್ಮ ಎಂಬೀರ್ವರು ಮದರಾಸು ಅಠಾಂ ಕಚೇರಿ ಮುಂದೆ ಆಂಧ್ರಪ್ರಾಂತಕ್ಕಾಗಿ ಉಪವಾಸ ಸತ್ಯಾಗ್ರಹ ಆರಂಭಿಸಿದ್ದಾರೆ.

ಅವಿರೋಧ ಆಯ್ಕೆ

ಮೈಸೂರು ಲೆ || ಅಸೆಂಬ್ಲಿಯಿಂದ ಭಾರತದ ಮೇಲ್ಮನೆಗೆ ಭಾರತ ಸರ್ಕಾರದ ಸಚಿವ ಶ್ರೀ ಕೆ ಸಿ ರೆಡ್ಡಿ ಆಯ್ಕೆಯಾಗಿದ್ದಾರೆ

ಕಳ್ಳತನ

ರೂ 7 ಸಾವಿರ ಮೌತ್ತದ ನಗನಾಣ್ಯಗಳನ್ನು ಕಡಪಾದಲ್ಲಿನ ಅಡ್ವೊಕೇಟರು ಶ್ರೀ ನಾಗರಾಜಶಾಸ್ತ್ರಿಗಳ ಮನೆಯಲ್ಲಿ ಕಳ್ಳತನವಾಗಿದೆ

ಯಶಸ್ವಿಯಾಯಿತು

ನಾಗವ್ವರಂಧ ಅರ್ವಿ ಬಂಬ ಊರಿನಲ್ಲಿ ಜನರು ಮಳೆಗಾಗಿ ಯಜ್ಞಮಾಡಿದ್ದು ಸಾರ್ಥಕವಾಯಿತು ಯಜ್ಞವು ತೀರಿದನಂತರ ಮಳೆ ಸುರಿದುದಲ್ಲದೆ ಕೆಲದಿನ ಮಳೆ ಸಹಾ ಬಂತು

ಹೆಸರು ಬದಲಾವಣೆ

ಮೈಸೂರಿನಲ್ಲಿ ಮುಖ್ಯಸಚಿವರ ಅಧಿಕೃತ ನಿವಾಸ ' ಲೇಕ್ ವ್ಯೂ ' ಗೆ ಜಲದರ್ಶಿನೀ ಎಂದು ಹೆಸರಿಡಲಾಗಿದೆ

ರೇಸ್ ಕೋರ್ಸ್‌ನಲ್ಲಿ ಭಾರಿ ಗಲಾಟೆ

— ಮೈಸೂರಿನಲ್ಲಲ್ಲ —

ಕೊಲಂಬೋದಿಂದ ಬಂದ ವಾರ್ತೆಯಿದು. 27 ನೇ ತಾ|| ನಡೆದ 6 ನೇ ರೇಸಿನಲ್ಲಿ ಕೆಲ ಕುದುರೆಗಳು ಸರಿಯಾಗಿ ಹೊರಡದೆ, ಮಿಕ್ಕವೇ ಓಡಿಬಂದವಲ್ಲೇ ಜಡ್ಜಿಗಳು ತೀರ್ಮಾನಿಸಿತ್ತರು. ಅಡಚಣೆ ಸ್ಟೀವರ್ಡ್‌ರು ಮತ್ತೆ ಜೂಜು ನಡೆಯಬೇಕೆಂದು ಅಜ್ಞೆ ಇತ್ತರು ಫೇವರಿಟ್ ಕುದುರೆಗೆ ಹೆಚ್ಚು ಹಣ ಹಾಕಿದ್ದವರಿಗೆ ಈ ಹೊಸ ಜೂಜು ಒಪ್ಪಿಗೆಯಾಗದೆ ಭಾರಿ ಗಲಾಟೆ ಆಗಿ ಕುರ್ಚಿ ಬೆಂಚು ಎಲ್ಲ ಒಡೆದು ಕೆಲವರಿಗೆ ಏಟು ತಗಲಿತು ಪೋಲೀಸರು ಬಂದು ತಹಬಂದಿಗೆ ತರಲು ಸ್ವಲ್ಪ ತಡವಾಯಿತು. 2 ನೇ ಬಾರಿ ರೇಸು ಓಡಿಸುವದು ಸಿಂಹಳ ಕುದುರೆ ಜೂಜು ಇತಿಹಾಸದಲ್ಲಿ ನಡೆದಿಂಲಿಲ್ಲ

Edited, Printed and Published by Dharma Prachara Nirata M. S. Krishna Rao at the Satyavadi Press Chamarajpuram Mysore

ಪೌರಸಭೆ

ಮೈಸೂರು ಪೌರಸಭೆಯ ಮುಂದುವರಿದ ಅಧಿವೇಶನ ಮುಂದಿನ ಸೋಮವಾರ 7 ನೇ ತಾ|| ಮಧ್ಯಾಹ್ನ 4 ಗಂಟೆಗೆ ಸಮಾವೇಶವಾಗುವುದು.

ವಸ್ತುಪ್ರದರ್ಶಕರ ಅಡಚಿತ ವರ್ಗ

ಅಖಿಲ ಭಾರತ ವಸ್ತುಪ್ರದರ್ಶಕರ ಸಂಘದ 21 ನೇ ವಾರ್ಷಿಕಾಧಿವೇಶನ ಈ ತಿಂಗಳು 28 ನೇ ತಾ|| ಮೈಸೂರು ಜೀವನರಾಯನ ಕಟ್ಟೆ ರಂಗಮಂಟಪದಲ್ಲಿ ಜರುಗಿ ಮುಂದಿನ ಸಾಲಿಗೆ ಈ ಕೆಳಗೆ ಕಂಡ ಮಹನೀಯರು ಆಯ್ಕೆಯಾಗಿರುವರು — ಅಧ್ಯಕ್ಷರು : ನಾಟ್ಯಕಲಾವಿಶಾರದ ಶ್ರೀ ಎಂ. ಸಿ ಮಹದೇವ ಸ್ವಾಮಿ, ಉಪಾಧ್ಯಕ್ಷರು : ಶ್ರೀ ಕೆ. ಎಸ್ ಗುರುಮೂರ್ತಿ, ಗೌರವ ಕಾರ್ಯದರ್ಶಿ : ಶ್ರೀ ಸಿ ಎ. ರಾಮು, ವ್ಯವಸ್ಥಾಪಕ ಸಮಿತಿ ಸದಸ್ಯರು : ಶ್ರೀಗಳಾದ ಬಿ ಎಸ್. ರುದ್ರಪ್ಪ, ಸ್ವೆ. ಎಸ್. ಗುಂಡಪ್ಪ, ಎಂ. ಗೌರೀಶಂಕರ್, ಎಸ್. ಆರ್ ಕೃಷ್ಣಮೂರ್ತಿ, ಬಿ. ಎಸ್. ಸುಬ್ಬರಾವ್, ಯು. ಎಲ್. ರಾಮಚಂದ್ರ ರಾವ್, ಅಂಬಾಳ್ ಕಂಪೆನಿ ವ್ಯವಸ್ಥಾಪಕರು, ಮೈಸೂರು ಪ್ರಾಂತೀಯ ಸಹಕಾರ ಮಾರ್ಕೆಟಿಂಗ್ ಸಂಘದ ಕಾರ್ಯದರ್ಶಿಯವರು, ಶ್ರೀ ಎಸ್ ಆರ್. ಶ್ರೀನಿವಾಸ್. ಶ್ರೀ ಎ ಎಸ್. ಚಂದ್ರಶೇಖರರಾವ್, ವಿ ಶಾಂತಮೂರ್ತಿ.

ವಾರ್ಷಿಕೋತ್ಸವ

ಸ್ಯಾನಿಟೋರಿಯಂ ಸಹಕಾರ ಸಂಘದ 7 ನೇ ವಾರ್ಷಿಕೋತ್ಸವವು ಮೊನ್ನೆ ಮೈಸೂರಿನ ಪಿ. ಕೆ. ಸ್ಯಾನಿಟೋರಿಯಂನಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು. ಗೃಹಸಚಿವ ಶ್ರೀ ಸಿದ್ಧವೀರಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಆ ರೋಗ್ಯ ಸಚಿವ ಶ್ರೀ ಟಿ. ಚನ್ನಯ್ಯನವರು ಪ್ರಾರಂಭೋತ್ಸವವನ್ನು ನೆರವೇರಿಸಿದರು.

ನಾಡಹಬ್ಬ

[ಸ್ವಂ. ಸು.] ಬೆಂಗಳೂರು

ಇದೇ ಸೆಪ್ಟಂಬರ್ 25 ರಿಂದ 29 ನೇ ಗುರುವಾರದ ವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಾಡಹಬ್ಬ ಏರ್ಪಾಟಾಗಿತ್ತು.

ಬ್ಲೀಡಿಗಾಗಿ ವೆಚ್ಚ

ಭಾರತವು, ಗಡ್ಡ ತೆಗೆವ ಬ್ಲೇಡುಗಳಿಗಾಗಿ ವರ್ಷಕ್ಕೆ 2 ಕೋಟಿ ರೂಪಾಯಿಗಳನ್ನು ವ್ಯಯಿಸುತ್ತಿದೆ. ಎಲ್ಲ ಜನರು ಇನ್ನು ಹತ್ತು ವರ್ಷಗಳ ವರೆಗೆ ಕ್ಷೌರ ಮಾಡಿಸಿಕೊಳ್ಳದಿದ್ದರೆ, ಭಾರತದಲ್ಲಿ 20 ಕೋಟಿ ರೂಪಾಯಿಗಳು ಉಳಿಯುವುವು ಎಂದು ಇತ್ತೀಚೆಗೆ ನಾಗಪುರದಲ್ಲಿ ಭಾಷಣ ಮಾಡುವಾಗ ಕಾಂಗ್ರೆಸಿನ ಮಾಜಿ ಕಾರ್ಯದರ್ಶಿ ಶ್ರೀ ಕಲಾ ವೆಂಕಟರಾಯರು ಹೇಳಿದರು. ಆದರೆ ಲಗ್ನಕ್ಕೆ ಸಿದ್ಧವಾಗುವ ಭಾವಿ ಮದುವಣಿಗರು ಮಾತ್ರ ಈ ಸೂಚನೆಗೆ ಕೊಡುವಂತಿಲ್ಲ ಎಂದೂ ವೆಂಕಟರಾಯರಿಗೆ ಸಂದೇಹ

ಉಡ್‌ಲ್ಯಾಂಡ್ ಯಶಸ್ವಿ 2 ನೇ ವಾರ

ರಾಮಜನ್ಮ Rama Janma

ಪಾತ್ರ — ನಿರೂಪರಾಯ್, ತ್ರಿಲೋಕ ಕಪೂರ್, ರಾಂಸಿಂಗ್

ಹೃದಯಂಗಮವಾದ ಪೌರಾಣೀಕ ಹಿಂದಿ ಚಿತ್ರ

ಪ್ರತಿದಿನ 3 ಪ್ರದರ್ಶನಗಳು

ಅಪೂರ್ವ 26-9-52 ರಿಂದ

ಕಲಾಣಂ ಪಣ್ಣಿಪಾರ್ [ತಮಿಳು]

ಪಾತ್ರ— ಎಸ್. ಟಿ ರಾಮರಾವ್, ಜಿ. ವರಲಕ್ಷ್ಮಿ, ಸಾವಿತ್ರಿ [ದಿನ 3 ಆಟಗಳು

ರಣಜಿತ್ 26-9-52 ರಿಂದ

ನೀಲಂ ಪೆರಿ [ಹಿಂದಿ]

ಪಾತ್ರ— ಗೀತಾಬಾಲಿ, ಸಜ್ಜನ್, ಗೋಪ್ [ದಿನ 3 ಆಟಗಳು

ತಿಳುವಳಿಕೆ

ಚಿನ್ನ, ಬೆಳ್ಳಿ, ಮತ್ತು ಇತರೆ ಗಿಂವಿ ಮಾಲುಗಳು ಮೇಲೆ ಲೇವಾದೇವಿ ಮಾಡುವವರಿಗೆ ಕಮ್ಮಿ ಬಡ್ಡಿಯಲ್ಲಿ ಹಣ ಎಲ್ಲಿ ಸಿಕ್ಕುತ್ತೆ ?

ಎಸ್. ಮಾಣಿಕ್‌ಚಂದ್ ಪುಕ್‌ರಾಜ್ ಮತ್ತು ಸನ್ಸ್, ಬ್ಯಾಂಕರ್ಸ್ ಮತ್ತು ಜೂಯಲರ್ಸ್, ಅಶೋಕರಸ್ತೆ, ದೊಡ್ಡಪೇಟೆ ಮೈಸೂರು ಬ್ಯಾಂಕು ಪಕ್ಕದಲ್ಲಿ, ದೊಡ್ಡ ಪೋಸ್ಟ್ ಆಫೀಸ್ ಸಮೀಪದಲ್ಲಿ, ಜಗ್ಗೂಲಾಲರವರ ಧರ್ಮ ಶಾಲಾ ಎದುರು ಅಂಗಡಿಯಲ್ಲಿಯೂ, ಇದೇ ಅಶೋಕಾ ರಸ್ತೆ ಆದಪ್ಪಾ ಚೌಕದಲ್ಲಿ 508 ನೇ ಕುಂಬಾರ ಹೆಂಚಿನ ಸದರಿಯವರ ಬ್ಯಾಂಚು ಅಂಗಡಿಯಲ್ಲಿಯೂ, ವಿಷ್ಣು ಅಸ್ವತ್ಥ ರಸ್ತೆ 1799 ನೇ ಮಹಡಿ ಮನೆಯಲ್ಲಿ ಸದರಿಯವರ ಬ್ಯಾಂಚು ಅಂಗಡಿಯಲ್ಲಿಯೂ ಸಿಗುತ್ತೆ

ಮೈಸೂರು ಉಕ್ಕನು ಬಳಸಿ

ಮೃದುವಾದ ಉಕ್ಕಿನ ಪಟ್ಟೆಗಳು,

ಮೈಸೂರು

- ದುಂಡು,
- ಚೌಕೋನ,
- ಸರಳುಗಳು,
- ಮೂಲೆಗಂಬಗಳು
- ಬೇಲುಕಟ್ಟುಗಳು

ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ,

ಭದ್ರಾವತಿ.

FURNITURE for Hire & Sale

HOUSE OF
Honesty
Security
Service
for
Buyers and Sellers
— That is —

Ahmed Bros.,

Cabinet makers &
Commision Agents
New Curzon Park Road
Mysore.

Raja Cycle Mart

ರಾಜಾ ಸೈಕಲ್ ಮಾರ್ಟ್

ಜಗನ್ಮೋಹನ ಬಂಗ್ಲೆ ಬೀದಿ

ಮೈಸೂರು

ಚೆನ್ನಾಗಿರುವ ಬೈಸಿಕಲ್‌ಗಳು ಬಾಡಿಗೆಗೆ ಕೊಡಲಾಗುತ್ತದೆ

ರಿಪೇರಿ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡಿಕೊಡಲಾಗುತ್ತೆ

ಕೆಲಸಗಳು ಬೇಗ, ಸುಲಭ ಛಾರ್ಜಿನಲ್ಲಿ ಮಾಡಿಕೊಡಲ್ಪಡುತ್ತವೆ

ಶಕ್ತಿಸುಧಾ

— ಉತ್ತಮವಾದ ಟಾನಿಕ್ —